ನನಗೇ ಅಸಹ್ಯವಾಗತೊಡಗಿತು. ಇಷ್ಟಾಗಿಯೂ, ಆ ಕತೆ ಬರೆಯುವಾಗ ಹುಟ್ಟಿದ್ದ ದಿಗ್ಭ್ರಮೆ ಮಾತ್ರ ಸುಳ್ಳಲ್ಲ ಎಂದು ಸಮಾಧಾನ ಮಾಡಿಕೊಳ್ಳಲೆತ್ನಿಸಿದೆ.

ನನ್ನ ಮನಸ್ಸಿನಲ್ಲಿ ನಡೆಯುತ್ತಿದ್ದುದೆಲ್ಲ ನನ್ನ ಮುಖದಲ್ಲಿ ಕಾಣಿಸಿಕೊಳ್ಳತೊಡಗಿತ್ತೋ ಏನೋ, ಅದನ್ನು ಗಮನಿಸುತ್ತಾ ರಮೇಶ್ ನಡುಹಳ್ಳಿಯ ಮುಖವೂ ಗಂಭೀರವಾಗತೊಡಗಿತು. 'ಜೋಸೆಫ್! ಆದರೆ ಆ ಕತೆ ಒಂಥರಾ ಪ್ರಾಫೆಟಿಕ್ ಕತೇ ಕಣ್ರೀ. ಈ ಕತೆ ಬರೆದ ಹದಿನೈದು ವರ್ಷದ ನಂತರ ಸಾಕೇತ್ ರಾಜನ್ ಇದೇ ಥರ ಪೋಲೀಸರ ಬ್ರೂಟಲ್ ಎನ್ ಕೌಂಟರಿಗೆ ಗುರಿಯಾಗಿಬಿಟ್ರಲ್ಲ' ಎನ್ನುತ್ತಾ ರಮೇಶ್ ದಿಗ್ಭ್ರಮೆಗೊಂಡವನಂತೆ ನಿಲ್ಲಿಸಿದ. ಅವನ ಮಾತು ಕೇಳುತ್ತಾ 'ಅಯ್ಯೋ! ಬಹುಮಾನದ ಆಸೆಯಿಂದ ಕತೆಗೆ ಪರಿಣಾಮಕಾರಿ ಮುಕ್ತಾಯ ಕೊಡಲು ಹೋಗಿ ಕಥಾನಾಯಕನನ್ನು ಕೊಂದಂತಾಯಿತಲ್ಲ?' ಎಂದು ನನಗೆ ತೀರಾ ಕಸಿವಿಸಿಯಾಗತೊಡಗಿತು.

ಆ ಕಸಿವಿಸಿ, ದಿಗ್ಭ್ರಮೆಗಳು ಈಗಲೂ ಅವನಲ್ಲಿ ಉಳಿದಿವೆಯೆಂಬಂತೆ ಜೋಸೆಫನ ಮುಖ ಕುಗ್ಗಿ ಇದ್ದಕ್ಕಿದ್ದಂತೆ ಓದುವುದನ್ನು ನಿಲ್ಲಿಸಿದ. 'ಅನೇಕ ಸಲ ನಮ್ಮ ತಪ್ಪುಗಳನ್ನು ಬಹಿರಂಗವಾಗಿ ಹಳಿದುಕೊಳ್ಳುವುದು ಕೂಡ ನಮ್ಮನ್ನು ನಾವು ವೈಭವೀಕರಿಸಿಕೊಳ್ಳುವ ಸುಪ್ತ ಪ್ರಯತ್ನವೇ ಆಗಿರಬಹುದು' ಎಂದು ಹಿಂದೊಮ್ಮೆ ನೀಷೆಯ ಯಾವುದೋ ಮಾತನ್ನು ಕೊಂಚ ಬದಲಿಸಿ ಬರೆದಿದ್ದ ಜೋಸೆಫ್, ಆ ಮಾತನ್ನು ಈಗ ಎದುರಿಗೆ ಕೂತಿದ್ದ ಗೆಳೆಯರಿಗೂ ಹೇಳುತ್ತಾ ಅವರ ಮುಖ ನೋಡಿದ. ಜೋಸೆಫ್ ತನಗೆ ಅನಿಸಿದ್ದನ್ನು ಪ್ರಾಮಾಣಿಕವಾಗಿ ಹೇಳುತ್ತಿರುವಂತೆ ಕಾಣುತ್ತಿದ್ದರಿಂದ, ಪರಿಣಾಮಕ್ಕಾಗಿ ಏನಾದರೂ ಮಾತಾಡಬೇಕೆಂಬ ಚಪಲ ಅಲ್ಲಿದ್ದ ಯಾರಲ್ಲೂ ಇದ್ದಂತೆ ಕಾಣುತ್ತಿರಲಿಲ್ಲ.

ಜೋಸೆಫ್ ಓದುತ್ತಿದ್ದುದನ್ನು ಗಮನವಿಟ್ಟು ಕೇಳಿಸಿಕೊಂಡಿದ್ದ ರಾಮೇಗೌಡ, 'ಒಂದಂತೂ ನಿಜ. ಹೋರಾಟಗಾರರ ಬಗ್ಗೆ ಯಾವ ಅಥೆಂಟಿಕ್ ಅನುಭವವೂ ಇಲ್ಲದೆ, ಸ್ಟಡಿ ಮಾಡದೆ, ಅಥವಾ ಇದನ್ನೆಲ್ಲ ಅನುಭವಿಸಿದೋರ ಹತ್ರ ಸರಿಯಾಗಿ ಮಾತಾಡಿ ತಿಳಕೊಳ್ಳದೆ, ಅಥವಾ ನಿನ್ನ ಕಲ್ಪನೆ ಆ ಸತ್ಯಗಳನ್ನ ಹಿಡಿಯಲಾರದೆ, ಕೇವಲ ಎಫೆಕ್ಟಿಗಾಗಿ ಕತೆ ಬರೆಯೋಕೆ ಹೋಗಿದ್ದರಿಂದ ಈ ಕತೆ ಇಮ್ಮಾರಲ್ ಆಗಿರಬಹುದು' ಅಂದ. ಮರುಗಳಿಗೆಗೇ ತನ್ನ ಮಾತು ಕಟುವಾಯಿತೇನೋ ಅನ್ನಿಸಿ, 'ಇದು ನಿನ್ನೊಬ್ಬನ ಸಮಸ್ಯೆ ಮಾತ್ರ ಅಲ್ಲ. ಕತೆ ಬರೆಯೋ ನಾವೆಲ್ಲರೂ ಇದನ್ನ ಮಾಡ್ತಾನೇ ಇರ್ತೀವಿ. ನಾನು ಆ ಶಾಲಿನೀನ ಮೆಚ್ಚಿಸೋಕೆ ನನ್ನ ಕತೇಲಿ ಅವಳನ್ನ ಹೀರೋಯಿನ್ ಮಾಡಿ ಸುಳ್ಳು ಸುಳ್ಳೇ ಅವಳಿಗೆ ರೈಲು ಹತ್ತಿಸಿರಲಿಲ್ಲವೆ! ಆಫ್ಟರಾಲ್ ನಾವೆಲ್ಲ ಹುಲು ಮಾನವರು ತಾನೆ! ಇರಲಿ! ಇನ್ನೂ ಓದೋದು ಇದ್ರೆ ಓದಿಬಿಡು' ಅಂದ.

'ಬೇಗ ಮುಗಿಸಿಬಿಡ್ತೀನಿ. ಆಮೇಲೆ ರಿಲ್ಯಾಕ್ಸಾಗಿ ಗುಂಡು ಹಾಕೋಣ' ಎಂದ ಜೋಸೆಫ್ ರಾಮೇಗೌಡನತ್ತ ಕೃತಜ್ಞತೆಯಿಂದ ನೋಡಿ, ತಾನು ಎಲ್ಲಿ ನಿಲ್ಲಿಸಿದ್ದನೋ ಅಲ್ಲಿಂದ ಓದಲು ಶುರು ಮಾಡಿದ:

ಯಾಕೋ ರಮೇಶ್ ನಡುಹಳ್ಳಿ, ಸಾಕೇತ್ ರಾಜನ್ ಎನ್‌ಕೌಂಟರ್ ಬಗ್ಗೆ ಹೇಳಿದಾಗಿನಿಂದ ಈ ಕತೆ ನನ್ನ ಮೇಲೆ ಸೇಡು ತೀರಿಸಿಕೊಳ್ತಾ ಇದೆ ಅನ್ನಿಸೋಕೆ ಶುರುವಾಯಿತು. ಆ ಫೀಲಿಂಗ್ ಮತ್ತೆ ಶುರುವಾದದ್ದು ನಟಿ ಸುಮಾ ಟೀಮು ಈ ಕತೇನ ಸಿನಿಮಾ ಮಾಡಲು ಹೊರಟ ಮೇಲೆ. ಈ ಕತೆಯಲ್ಲಿ ಎನ್‌ಕೌಂಟರಿಗೆ ಬಲಿಯಾಗುವ ಕವಿಯ ಗರ್ಲ್ ಫ್ರೆಂಡ್ ಪಾತ್ರವನ್ನು 'ಅಥೆಂಟಿಕ್ಕಾಗಿ ಮಾಡಿ ನ್ಯಾಶನಲ್ ಅವಾರ್ಡ್ ಹೊಡೀತೀನಿ' ಎಂದು ಸುಮಾ ಹೊರಟಿದ್ದಳು. ಅವಳ ಉತ್ಸಾಹ ನೋಡಿದ ಮೇಲೆ, ಸುಮಾ ನಕ್ಸಲೈಟ್ ಚಳುವಳಿ, ಎಡಪಂಥೀಯ ಹೋರಾಟ ಎಲ್ಲದರ ಬಗ್ಗೆ ತೀರಾ ರೊಮ್ಯಾಂಟಿಕ್ಕಾಗಿ ಈ ಸಿನಿಮಾ ಮಾಡುತ್ತಾಳೇನೋ ಅನ್ನಿಸಿ, 'ನೋ ನೋ ನೋ ಸುಮಾ! ಆ ಕತೆ ತಂಟೆಗೆ ಹೋಗಬೇಡ' ಅಂದೆ. 'ಇಲ್ಲ ಇಲ್ಲ! ನಿನಗೆ ಸಿನಿಮಾ ಫೀಲ್ಡ್ ಗೊತ್ತಿಲ್ಲ! ಇಲ್ಲಿ ಒಂಚೂರು ಟ್ಯಾಲೆಂಟ್ ಇದ್ರೆ ಸಾಕು, ಹಿಟ್ ಫಿಲಂ ಮಾಡಬಹುದು!' ಅಂದಳು. ಈಗಾಗಲೇ ಏನೇನೋ ರೇಜಿಗೆಗಳಿಗೆ ಗುರಿಯಾಗಿರುವ ಈ ಕತೆಯನ್ನು ಸುಮಾ ಸಿನಿಮಾ ಮಾಡಲು ಹೋಗಿ ಅದರೊಳಗೆ ಇನ್ಯಾವನೋ ತನಗೆ ಬೇಕುಬೇಕಾದ ಡೈಲಾಗ್ ಸೇರಿಸಿ ಬೇರೇನೋ ಎಫೆಕ್ಟ್ ಕೊಡಲು ಹೋಗಿ, ಅದು ಇನ್ನೇನೋ ಆಗಿ ಇವೆಲ್ಲ ರಗಳೆಯೇ ಬೇಡವೆನ್ನಿಸಿ, 'ಅಯ್ಯೋ! ಕತೆಯ ಫಾರ್ಮೇ ಬೇರೆ, ಸಿನಿಮಾ ಫಾರ್ಮೇ ಬೇರೆ; ನನ್ನಂಥೋರಿಗೆ ಈ ಸಿನಿಮಾ ಮೀಡಿಯಮ್ಮೇ ಸ್ವಲ್ಪ ಲೌಡ್! ಪ್ಲೀಸ್ ಸುಮಾ! ಆ ಬಡಪಾಯಿ ಕತೇನ ಅದರ ಪಾಡಿಗೆ ಬಿಟ್ಟುಬಿಡು, ಬದುಕ್ಕೊಳ್ಳಿ!' ಎಂದು ಗೊಣಗಿದೆ.

ಈಗಾಗಲೇ ಮನಸ್ಸಿನಲ್ಲೇ ಅರ್ಧ ಸಿನಿಮಾ ತೆಗೆದೇಬಿಟ್ಟಿದ್ದ ಸುಮಾ ಆ ಕತೇನ ಅಷ್ಟಕ್ಕೇ ಬಿಡುವಂಥವಳಾಗಿರಲಿಲ್ಲ. ಅವಳ ಉಮೇದು ಅವಳ ಸಿನಿಮಾದ ನಿರ್ದೇಶಕನಿಗೂ ಹಬ್ಬಿ ಅವರ ಸಿನಿಮಾ ಟೀಮು ಮಲೆನಾಡಿನ ಕಾಡಿಗೇ ಹೋಗಿ ವಾರಗಟ್ಟಳೆ ಶೂಟ್ ಮಾಡುತ್ತಿದ್ದಾಗ ಸುಮಾಗೆ ಇದ್ದಕ್ಕಿದ್ದಂತೆ ಭಯಂಕರ ಜ್ವರ ಬಂತು. ಸುಮಾ ಉಳಿಯುವುದೇ ಡೌಟು ಎಂದು ಗೆಳೆಯರು ಹೇಳುತ್ತಿದ್ದಾಗ, ಸುಮಾ ಆರು ತಿಂಗಳು ಬಿಟ್ಟು ಒಂದು ಮಧ್ಯಾಹ್ನ ನನ್ನೆದುರಿಗೆ ಬಂದು ನಿಂತು ನೆಟ್ಟಗೆ ಕತ್ತೆತ್ತಿ ಅದೇ ಆಗ ನಗುವುದನ್ನು ರೂಢಿ ಮಾಡಿಕೊಂಡಿದ್ದ ಮಗುವಿನಂತೆ ಫ್ರೆಶ್ಶಾಗಿ ನಕ್ಕಳು. 'ಹಾಯ್ ಜೋಸೆಫ್! ನಿನ್ ಹುಲಿ ಎಲ್ಲಿ ಹೋಯ್ತೋ ಗೊತ್ತಿಲ್ಲ! ಪಾರಿವಾಳ ಮಾತ್ರ ಹಾರ್ತಾ ಬಂದು ಇಲ್ಲಿ ನಿಂತಿದೆ!' ಎಂದು ನಕ್ಕ ಸುಮಾ, ಇನ್ನೂ 'ಹುಲಿ ಮತ್ತು ಪಾರಿವಾಳ' ಕತೆಯನ್ನು ಸಿನಿಮಾ ಮಾಡಿ ಮುಗಿಸುವ ಗುಂಗಿನಲ್ಲೇ ಇದ್ದಳು. ಅವತ್ತು ಸುಮಾ ಸಾವನ್ನು ಗೆದ್ದಂತೆ ಕಂಡಳು. ಆದರೆ ಮುಂದಿನ ಆರೇ ತಿಂಗಳಲ್ಲಿ ಸುಮಾ ತೀರಿಕೊಂಡಿದ್ದಳು. ಸಿನಿಮಾ ಡಬ್ಬದಲ್ಲೇ ಉಳಿಯಿತು. ಯಾಕೋ ಈ ಕತೆ ನನ್ನ ಮೇಲೆ ಸೇಡು ತೀರಿಸ್ಕೊಂತಾ ಇದೆ ಅನ್ನೋ ಮತ್ತೆ ಒಂಥರಾ ಭಯ ಶುರುವಾಯಿತು.

2


ಇಷ್ಟನ್ನು ಬರೆದುಕೊಂಡು ಬಂದಿದ್ದ ಜೋಸೆಫ್ ತನ್ನ ವಾರಗೆಯ ಕತೆಗಾರರ ಎದುರು ಅದನ್ನು ಓದಿ ಮುಗಿಸಿ ಹಗುರಾದ. ಅಷ್ಟೊತ್ತಿಗಾಗಲೇ ಸೂರ್ಯ ಮುಳುಗತೊಡಗಿದ್ದ. ಆ ಸಂಜೆ ಮೂವರು ಕತೆಗಾರರರೂ ವಿಚಿತ್ರ ಹೈಟಿನಲ್ಲಿದ್ದರು. ಪಾದ್ರಿಯ ಮುಂದೆ ನಿವೇದಿಸಿಕೊಳ್ಳುವವನಂತೆ ಜೋಸೆಫ್ ಎಲ್ಲವನ್ನೂ ಗೆಳೆಯರ ಬಳಿ ಹೇಳಿಕೊಳ್ಳುತ್ತಿದ್ದರೂ ಎದುರಿಗೆ ಕೂತಿದ್ದವರು ತನಗಿಂತ ಕಡಿಮೆ ಲೆವೆಲ್ಲಿನ ಕತೆಗಾರರೆಂಬ ಅಂದಾಜು ಅವನಿಗೆ ಇದ್ದುದರಿಂದ ಅವನ ನಿವೇದನೆಯಲ್ಲಿ ಹೆಚ್ಚಿನ ಆತ್ಮವಿಶ್ವಾಸವಿತ್ತು. ಈ ನಿವೇದನೆಯನ್ನು ಕೇಳುತ್ತಿದ್ದ ರಾಮೇಗೌಡನಿಗೆ ವಿಚಿತ್ರ ಭಯ ಮುತ್ತತೊಡಗಿದ್ದರೆ, ಹೊಸ ಕತೆಗಾರ ಹಮೀದುವಿಗೆ ಮಾತ್ರ ಜೋಸೆಫ್ ಇತ್ತಿತ್ತಲಾಗಿ ಬರೆಯುತ್ತಿದ್ದ 'ಮ್ಯಾಜಿಕ್ ರಿಯಲಿಸಂ' ಕತೆಗಳಲ್ಲಿ ಬರುವ ವಿಚಿತ್ರ ಚಿತ್ರಗಳ ಹಾಗೆ ಅವನ ಈ ನಿವೇದನೆಯೂ ವಿಚಿತ್ರವಾಗಿದೆ ಅನ್ನಿಸಿ ನಗು ಬರುತ್ತಿತ್ತು. ಆದರೂ ಅವನಿನ್ನೂ ಸಣ್ಣವನಾದ್ದರಿಂದ, ಕೊಂಚ ಹಿಂಜರಿಕೆಯಿಂದಲೋ ಏನೋ ನಡುನಡುವೆ ತೀರಾ ಮೂಗು ತೂರಿಸದೆ ಕೊನೆಗೆ, 'ಇದೊಳ್ಳೆ ಮ್ಯಾಜಿಕ್ ರಿಯಲಿಸಂ ಆಯ್ತಲ್ಲ ಸಾ!' ಎಂದು ಸುಮ್ಮನಾದ.

ಆದರೆ ಜೋಸೆಫ್‌ನ ನಿವೇದನೆ ಮುಗಿಯುವ ಹೊತ್ತಿಗೆ ರಾಮೇಗೌಡನಿಗೆ ತಾನು ಬರೆದ, ಬರೆಯಲು ಶುರು ಮಾಡಿ ಅರ್ಧಕ್ಕೇ ಕೈಬಿಟ್ಟ ಕತೆಗಳು ನೆನಪಿಗೆ ಬರತೊಡಗಿದವು. ರಾಮೇಗೌಡ ಇದ್ದಕ್ಕಿದ್ದಂತೆ ಬೆಚ್ಚಿದವನಂತೆ 'ಅಯ್ಯಯ್ಯಪ್ಪ!' ಅಂದಿದ್ದು ಕಂಡು ಜೋಸೆಫನ ಮುಖದ ಮೇಲೆ 'ಯಾಕೆ' ಎಂಬ ಪ್ರಶ್ನೆ ಮೂಡಿತು. ಅದನ್ನು ಕಂಡ

## ಗಾಂಧಿ ನಾಮ

ಗಾಂಧಿ ಈಗ ಇಲ್ಲ
ಹಾಗಾಗಿ ಜಪಿಸುತ್ತೇವೆ ನಾವು
ಸದಾ ಗಾಂಧಿ ನಾಮ
ಗಾಂಧಿ ಇದ್ದಿದ್ದರೆ
ಹಾಕುತ್ತಿದ್ದೆವು ಗಾಂಧಿಗೂ
ಪಂಗನಾಮ!

—ಕಾಸರಗೋಡು ಅಶೋಕ್ ಕುಮಾರ್



ಈಶ್ವರ